ಅವಕಾಶವಿದ್ದುದೇ ಪಿ.ಆರ್.ಓ. ಅವಳನ್ನು ಆ ಕ್ಯಾಬಿನ್‌ಗೆ ಕರೆದೊಯ್ಯಲು ಕಾರಣವಾಗಿತ್ತು.

ಅವಳು ಅಪಘಾತಕ್ಕೊಳಗಾದ ಹಲವಾರು ವ್ಯಕ್ತಿಗಳ ಸ್ಥಿತಿಯನ್ನು ಸಮೀಪದಿಂದಲೇ ವೀಕ್ಷಿಸಿದ್ದಳು. ರಕ್ತಸಿಕ್ತ ದೇಹಗಳನ್ನು ತುರ್ತು ಘಟಕಕ್ಕೆ ಸಾಗಿಸಿದ್ದಳು. ಅಂತಹ ಹಲವಾರು ಪ್ರಕರಣಗಳನ್ನು ನೋಡಿಯಾದ ಬಳಿಕ ಅವಳಲ್ಲಿ ಒಂದು ಬಗೆಯ ನಿರ್ವಿಕಾರ ಭಾವ ಆವರಿಸಿ ಯಾಂತ್ರಿಕವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸಿದ್ದುಂಟು. ಆದರೀಗ ಓರ್ವ ಜೀವಂತ ಮನುಷ್ಯನ ದೇಹದ ಸ್ಥಿತಿಯನ್ನು ಯಥಾವತ್ತಾಗಿ ಉಪಕರಣದಿಂದ ಸ್ಕ್ಯಾನ್ ಮಾಡಿಸಿ 3ಡಿ ಚಿತ್ರಣದಲ್ಲಿ ಮೂಡಿಸಿ ಅವನ ದೇಹದ ಆಯಾ ಭಾಗಗಳಿಗೆ ಅತಿ ಸೂಕ್ಷ್ಮ ರಂಧ್ರಗಳನ್ನು ಕೊರೆದು ಶಸ್ತ್ರಚಿಕಿತ್ಸೆ ನಡೆಸುತ್ತಿರುವುದನ್ನು ನೋಡಿದಾಗ ಅವಳಿಗೆ ಮನುಷ್ಯನ ದೇಹದ ಅನಾಟಮಿಯ ದರ್ಶನವಾದಂತಾಗಿತ್ತು. ಕಡೆಗೂ ಒಂದು ರೊಬೋ ಕೈಯ ಮೂಲಕ ಗಾಯಾಳುವಿನ ನಿರ್ದಿಷ್ಟ ಭಾಗವನ್ನು ಕತ್ತರಿಸಿ ಹಾಲಿ ಇದ್ದ ಪಿತ್ತಜನಕಾಂಗಕ್ಕೆ ಬದಲಿ ವ್ಯವಸ್ಥೆ ಮಾಡಿದ ಬಳಿಕ ಅಲ್ಲಿದ್ದ ಐ.ಸಿ.ಯು. ಘಟಕದ ಬಾಗಿಲು ತೆರೆದುಕೊಂಡಿತ್ತು.

ಖುಷಿಯಿಂದ ಗೆಲುವಿನ ನಸುನಗೆಯೊಂದಿಗೆ ವೈದ್ಯರ ತಂಡ ಹೊರ ಬಂದಾಗ ಹನ್ನಾ ಅವರನ್ನು ಹಾರ್ದಿಕವಾಗಿ ಅಭಿನಂದಿಸಿದಳು. ನಂತರ ತನ್ನ ಕಾರ್ಯ ಮುಗಿಯಿತೆಂಬಂತೆ ಅಲ್ಲಿಂದ ಹೊರಡುವಾಗ ಅವಳಿಗೆ ವಿಮಾ ಕಂಪನಿ ಕಳುಹಿಸಿದ ತುರ್ತು ಸಂದೇಶವನ್ನು ಅವಳ ಎಂ.ಪಿ. ವಾಕಿಯ ಅಸಿಸ್ಟೆಂಟ್ 'ಶಮ್ಮಿ' ಸಣ್ಣ ಆಕೃತಿಯೊಂದಿಗೆ ಪರದೆಯ ಮೇಲೆ ಕಾಣಿಸಿ ಅರುಹಿತ್ತು.

'ಮ್ಯಾಮ್. ನಿಮಗೆ ಆಗಿಂದಲೂ ವಿಮಾ ಕಂಪನಿಯೊಂದು ಸಂಪರ್ಕಿಸಲು ಪ್ರಯತ್ನಿಸುತ್ತಿದೆ. ಆದರೆ ನೀವು ಕರೆ ಸ್ವೀಕರಿಸಿಲ್ಲ. ನೀವೀಗ ಇರುವ ತಾಣದಲ್ಲಿ ಗಾಯಾಳುವೊಬ್ಬರ ಚಿಕಿತ್ಸೆ ನಡೆದಿದ್ದು ಸರಿಯಷ್ಟೇ. ಅದಕ್ಕೆ ಸಂಬಂಧಪಟ್ಟ ವಿಷಯ' ಎಂದಾಗ ಹನ್ನಾ, 'ಆಯ್ತು, ಅವರಿಗೆ ಸಂಪರ್ಕ ಕಲ್ಪಿಸು' ಎಂದುತ್ತರಿಸಿದಳು. ಅವಳ ಸೂಚನೆಯಂತೆ ವಿಮಾ ಕಂಪನಿಯ ಪ್ರತಿನಿಧಿ ಅವಳ ವಾಕಿಯ ಪರದೆಯ ಮೇಲೆ ಮೂಡಿ ಬಂದಿದ್ದ.

'ಮ್ಯಾಮ್. ತುರ್ತು ಸಂದೇಶ ನಿಮಗೆ ಬಂದಿದೆ. ಗಾಯಾಳು ಪರಾಶ್ರಮ್ ನೀವೀಗ ಇರುವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವನಷ್ಟೇ. ಅವನ ಸಮಗ್ರ ವಿಮಾ ದಾಖಲೆಗಳು ಅಪ್‌ಡೇಟ್ ಆಗಿದ್ದರೂ ಅಪಘಾತವಾದ ವಿವರಗಳನ್ನು ಸಂಚಾರ ವಿಭಾಗ ತಮ್ಮ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿಲ್ಲ. ತನಿಖಾಧಿಕಾರಿಗಳಿಗೆ ಸಂಪರ್ಕಿಸಲು ಪ್ರಯತ್ನಿಸಿದಾಗ ಅವರು ಸ್ಥಳದ ತನಿಖೆ ಮುಗಿಸಿ ನೀವಿರುವೆಡೆಗೇ ಬರುತ್ತಿರುವರೆಂಬ ಮಾಹಿತಿಯನ್ನು ತಿಳಿಸಿದರು. ಕೊಂಚ ಆ ಗಾಯಾಳುಗಳ ಸಂಬಂಧಿಕರು ಮತ್ತು ತನಿಖಾಧಿಕಾರಿಗಳು ಅಪಘಾತದ ವಿವರಗಳನ್ನು ನೀಡಲು ತಿಳಿಸಿ' ಎಂದಾಗ ಹನ್ನಾ ಅವರ ಸಂಪರ್ಕವನ್ನು ಟ್ಯಾಗ್ ಮಾಡಿದಳು.

'ಆಗಲಿ. ತನಿಖಾಧಿಕಾರಿಯವರಿಗೆ ಮಾಹಿತಿ ರವಾನಿಸುತ್ತೇನೆ. ನೀವು ಇತ್ತ ಬಂದರೆ ಅನುಕೂಲ ಆಗುತ್ತದೆಯೇನೋ?'

'ನಾವು ಕೆಲವೇ ನಿಮಿಷಗಳಲ್ಲಿ ಅಲ್ಲಿರಲು ಪ್ರಯತ್ನಿಸುತ್ತೇವೆ ಮ್ಯಾಮ್' ಎಂದವರೇ ಸಂಪರ್ಕ ಕಡಿದರು.

ಹನ್ನಾ ತನ್ನ ಎಂ.ಪಿ. ವಾಕಿ ಅಸಿಸ್ಟೆಂಟ್‌ಗೆ ಕರೆ ನೀಡಿದಾಗ ಸಣ್ಣ ಆಕೃತಿಯು ಪರದೆಯ ಮೇಲೆ ಕಾಣಿಸಿತ್ತು. 'ಗಾಯಾಳುವಿನ ಅಪಘಾತವಾದ ಸ್ಥಳದ ವಿವರ ಪಡೆದು ಅಲ್ಲಿನ ವ್ಯಾಪ್ತಿಯ ತನಿಖಾಧಿಕಾರಿ ಈಗ ಎಲ್ಲಿರುವರೆಂದು ತಿಳಿದುಕೋ...' ಎಂದು ಶಮ್ಮಿಗೆ ಆದೇಶ ನೀಡಿದಾಗ 'ಆಯ್ತು ಮ್ಯಾಮ್' ಎನ್ನುತ್ತಾ ಅದು ಪರದೆಯ ಮೇಲಿಂದ ಕಣ್ಮರೆಯಾಗಿತ್ತು.

ಪರದೆಯ ಹಿಂದೆ ಅದು ತನ್ನ ನಿರ್ದೇಶನದಂತೆ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ಹನ್ನಾ ಬಲ್ಲಳು. ಅಷ್ಟರಲ್ಲಿ ಪಿ.ಆರ್.ಓ. ಕ್ಯಾಬಿನ್‌ನಿಂದಲೇ ಕೆಲವು ಸಂವಹನ ಕಾರ್ಯಗಳನ್ನು ನಡೆಸುವುದು ಬಾಕಿ ಇತ್ತು.

'ಅಂತೂ ನಮ್ಮ ಯಶಸ್ಸಿಗೆ ನಿಮ್ಮ ಕೊಡುಗೆಯೂ ಸಂದಿದೆ ಮ್ಯಾಮ್' ಎಂದು ಪಿ.ಆರ್.ಓ. ಮೆಚ್ಚುಗೆ ವ್ಯಕ್ತಪಡಿಸಿದಾಗ ಅದು ತೃಣಮಾತ್ರವೆಂಬಂತೆ ತಲೆ ಕೊಡವಿಕೊಂಡು, 'ಇನ್ನೂ ನಮ್ಮ ಕೆಲಸ ಮುಗಿದಿಲ್ಲ ಮಿ. ಪಿ.ಆರ್.ಓ. ಹೊರಗೆ ಗಾಯಾಳುವಿನ ಸಂಬಂಧಿಕರ ದಂಡು ನೋಡಿದಿರಲ್ಲವೇ?' ಅವಳ ದೃಷ್ಟಿಯನ್ನನುಸರಿಸಿದ ಪಿ.ಆರ್.ಓ.ನ ದೃಷ್ಟಿ ಗಾಜಿನ ಕ್ಯಾಬಿನ್‌ನ ಹೊರಗೆ ತಮ್ಮೊಳಗೇ ಗಹನ ಚರ್ಚೆ ನಡೆಸುತ್ತಿದ್ದ ಗುಂಪಿನ ಮೇಲೆ ನೆಟ್ಟಿತು.

'ಅವರಿಗೆ ಈಗ ಗಾಯಾಳು ಜೀವನ್ಮರಣದ ಹೋರಾಟದಲ್ಲಿ ಗೆದ್ದು ಬಂದಿರುವ ವಿಷಯ ತಿಳಿಯಿತೇನೋ. ಸಂಭ್ರಮಿಸುತ್ತಿದ್ದಾರೆ' ಎಂದ.

'ಆದರೆ ಅದರೊಂದಿಗೆ ಮತ್ತೊಂದು ಬಹಳ ಮುಖ್ಯವಾದ ವಿಚಾರವೊಂದಿದೆ. ಅವರಲ್ಲಿ ಕೆಲವು ಯೋಚನೆಗೀಡಾದವರೂ ಇರುವುದನ್ನು ಗಮನಿಸಿದಿರಾ?' ಅವಳ ಸೂಕ್ಷ್ಮ ಕಂಗಳಿಗೆ ಈ ವಿಚಾರ ಕುತೂಹಲ ಕೆರಳಿಸಿತ್ತಾದರೂ ಅವಳ ಊಹೆ ನಿಜವಾಗುವಂತೆ ತೋರತೊಡಗಿತ್ತು.

'ಕೆಲವರಿಗೆ ಮುಂದೇನು ಎಂಬ ಪ್ರಶ್ನೆ ಕಾಡುತ್ತಿದೆಯೇ...'

ಕೆಲವೇ ನಿಮಿಷಗಳಲ್ಲಿ ಹನ್ನಾಳ ಅಸಿಸ್ಟೆಂಟ್ ಶಮ್ಮಿ ಅವಳ ವಾಕಿ ಪರದೆಯ ಮೇಲೆ ಕಾಣಿಸಿಕೊಂಡಿದ್ದಳು. 'ಮ್ಯಾಮ್. ನೀವು ಹೇಳಿದಂತೆ ತನಿಖಾಧಿಕಾರಿಯ ಲೊಕೇಷನ್ ತಿಳಿದುಕೊಂಡೆ. ಅವರು ಇನ್ನು ಹತ್ತು ನಿಮಿಷಗಳಲ್ಲಿ ಇಲ್ಲಿಗೆ ಆಗಮಿಸಬಹುದು.'

'ಓಕೆ ಫೈನ್' ಎಂದವಳೇ ಪಿ.ಆರ್.ಓ.ಗೆ ಗಾಯಾಳುವಿನ ಹತ್ತಿರದ ಸಂಬಂಧಿಕರೊಬ್ಬರನ್ನು ಕರೆಸಲು ತಿಳಿಸಿದಳು. ಕೆಲವೇ ಕ್ಷಣಗಳಲ್ಲಿ ಓರ್ವ ವ್ಯಕ್ತಿಯನ್ನು ಅವಳ ಮುಂದೆ ಹಾಜರುಪಡಿಸಲಾಗಿತ್ತು.

'ವಿಮಾ ಕಂಪನಿಗೆ ಅಪಘಾತಕ್ಕೊಳಗಾದ ನಿಮ್ಮ ಸಂಬಂಧಿಯ ದಾಖಲೆಗಳನ್ನು ಅವರ ಪೋರ್ಟಲ್‌ಗೆ ಅಪ್‌ಲೋಡ್ ಮಾಡಿಲ್ಲವೆಂದು ತಿಳಿಸುತ್ತಿದ್ದಾರೆ. ಅವರುಗಳು ಇನ್ನೇನು ಕೆಲಹೊತ್ತಿಗೇ ಇಲ್ಲಿಗೆ ಬರಬಹುದು. ಆಸ್ಪತ್ರೆಯವರೊಂದಿಗೆ ಹಾಗೂ ತನಿಖಾಧಿಕಾರಿಯೊಂದಿಗೆ ಚರ್ಚಿಸಿದ ನಂತರವಷ್ಟೇ ನಿಮ್ಮ ಸಂಬಂಧಿಯ ಚಿಕಿತ್ಸೆಯ ವೆಚ್ಚವನ್ನು ಭರಿಸುತ್ತಾರೆ'. ಅವಳ ಮಾತು ಅವರಲ್ಲಿ ಸಂಜೀವಿನಿಯಂತೆ ಕೆಲಸ ಮಾಡಿತ್ತೇನೋ.

ಒಮ್ಮೆಲೇ ಉತ್ಸಾಹಭರಿತರಾಗಿ, 'ನಮ್ಮ ಕಡೆಯಿಂದ ಸಂಪೂರ್ಣ ಮಾಹಿತಿ ನೀಡುತ್ತೇವೆ. ನಮಗೆ ಈ ಆಸ್ಪತ್ರೆಯ ಬಿಲ್ ಕೂಡಲೇ ಭರಿಸಿದರೆ ಸಾಕು' ಎಂದು ವಾಹನ ಹಾಗೂ ಆ ವಾಹನ ಚಲಾಯಿಸಿದ್ದ ತನ್ನ ಸಂಬಂಧಿಯ ವಿವರ ಪಡೆಯಲು ಹೊರಹೋದ. ಕೆಲ ಹೊತ್ತಿಗೆ ತನಿಖಾಧಿಕಾರಿಯ ತಂಡವೊಂದು ಅಲ್ಲಿಗೆ ಆಗಮಿಸಿ ವೈದ್ಯರ ಬಳಿ ಗಾಯಾಳುವಿನ ಸ್ಥಿತಿಗತಿ ವಿಚಾರಿಸಿತ್ತು. ನಂತರ ಹನ್ನಾಳೊಂದಿಗೆ ಪಿ.ಆರ್.ಓ. ಕ್ಯಾಬಿನ್‌ನಲ್ಲಿ ಕುಳಿತುಕೊಂಡು ತಮ್ಮ ಮಾಹಿತಿ ಕ್ರೋಢೀಕರಣದ ಕೆಲಸದಲ್ಲಿ ತೊಡಗಿದ್ದರು.

ತನಿಖಾಧಿಕಾರಿಯ ಇಬ್ಬರು ರೊಬೋ ಸಹಾಯಕರು ತಮ್ಮ ಎದೆಯ ಸ್ಕ್ರೀನ್ ಮೇಲೆ ವಿವರಗಳನ್ನು ಪುನರಾವರ್ತಿಸಿದರೆ ತನಿಖಾಧಿಕಾರಿಯು ವೈದ್ಯರು ನೀಡಿದ ಮಾಹಿತಿಯನ್ನು ಅದರೊಂದಿಗೆ ಸಮೀಕರಿಸಿ ಘಟನೆ ನಡೆದ ಸ್ಥಳದ ಪುನರ್ ನಿರ್ಮಾಣದ ಕೆಲಸ ಮಾಡುತ್ತಿದ್ದರು. ಅಷ್ಟರಲ್ಲಿ ವಿಮಾ ಕಂಪನಿಯ ಪ್ರತಿನಿಧಿಯೂ ಅಲ್ಲಿಗೆ ಆಗಮಿಸಿದ್ದ.

'ಹನ್ನಾ ಮ್ಯಾಮ್. ನಮ್ಮ ಪೋರ್ಟಲ್‌ಗೆ ಎಲ್ಲಾ ಮಾಹಿತಿ ಅಪ್‌ಲೋಡ್ ಆಗಿ ಅಪಘಾತ ಸಾಬೀತಾಗದ ಹೊರತು ನಾವು ಆಸ್ಪತ್ರೆಯ ಬಿಲ್ ಪಾವತಿ ಮಾಡುವುದಾಗಲಿ ವಾಹನದ ದುರಸ್ತಿಗೆ ತಗಲುವ ವೆಚ್ಚವಾಗಲಿ ಭರಿಸಲಿಕ್ಕಾಗದು' ಎಂದು ಖಡಾಖಂಡಿತವಾಗಿ ನುಡಿದಾಗ ಹನ್ನಾ ಆಶ್ಚರ್ಯ ವ್ಯಕ್ತಪಡಿಸಿದಳು.

'ನಿಮ್ಮ ಬಳಿ ತನಿಖಾಧಿಕಾರಿಗಳಿದ್ದಾರೆ. ಆಸ್ಪತ್ರೆಯವರಿದ್ದಾರೆ. ಗಾಯಾಳುವಿನ ಸಂಬಂಧಿಕರಿದ್ದಾರೆ. ರೊಬೋಗಳು ಸಂಗ್ರಹಿಸಿರುವ ಮಾಹಿತಿ ಅಲ್ಲಗಳೆಯುವಂತಿಲ್ಲವಲ್ಲ? ನೀವು ತಡಮಾಡಿದಷ್ಟೂ ಗಾಯಾಳುವಿನ ಸಂಬಂಧಿಕರಿಗೆ ತ್ರಾಸವಾಗುತ್ತದೆ. ಅವರು ನಿಮಗೆ ಎಲ್ಲಾ ಸಹಾಯ ಮಾಡುವುದರಿಂದ, ನಾನು ಇಲ್ಲಿ ಈಗ ಉಳಿಯುವುದು ಔಚಿತ್ಯವಲ್ಲ' ಎನ್ನುತ್ತಾ ಹೊರಡಲುನುವಾದಳು.

ಬಹಳಷ್ಟು ಸಂದರ್ಭಗಳಲ್ಲಿ ತಮ್ಮ ವ್ಯಾಪ್ತಿಯ ಕೆಲಸ ಮೀರಿ ಕಾರ್ಯ ನಿರ್ವಹಿಸುವುದು ಅನಿವಾರ್ಯವಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ಅವಶ್ಯಕತೆ ಇದ್ದಾಗಷ್ಟೇ

## ಭಗ್ನ

ನೂರು ಕನಸು ಹೊತ್ತು
ಹುತ್ತ ಕಟ್ಟಿದರೇನು
ಗೆದ್ದಲು
ಈಗ ಅದರಲ್ಲಿರುವುದು
ಗೆದ್ದಲಲ್ಲ
ವಿಷದ ಹಾವು!

**ಕಾಸರಗೋಡು ಅಶೋಕ್ ಕುಮಾರ್**